ಆ) **ಗ್ರಾಮೀಣ ಪ್ರದೇಶ**

ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದಂತೆ ಮನೆಗಳನ್ನು ಮಾರ್ಚ್ 2007 ರೊಳಗಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ

ನಗರ ಪ್ರದೇಶ

ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ಮನೆಗಳನ್ನು ಮುಂಡರಗಿ ಮತಕ್ಷೇತ್ರದಲ್ಲಿ ಪ್ರಗತಿಯಲ್ಲಿರುವ 313 ಮನೆಗಳನ್ನು ಫಲಾನುಭವಿಗಳೇ ಕಟ್ಟಿಕೊಳ್ಳುತ್ತಿರುವುದರಿಂದ ಮಾರ್ಚ್ 2007 ರೊಳಗಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ

ಇ) 3 ವರ್ಷಗಳಿಂದ ಅಪೂರ್ಣವಾಗಿರುವುದಕ್ಕೆ ವಿವರ ಈ ಕೆಳಗಿನಂತಿದೆ

1) ನಿವೇಶನ ಸಮಸ್ಯೆಯಿಂದಾಗಿ

2) ಸದರಿ ಮನೆಗಳ ನಿರ್ಮಾಣ ಕಾರ್ಯವನ್ನು ಕರ್ನಾಟಕ ಭೂಸೇನಾ ನಿಗಮ ಇವರಿಗೆ ವಹಿಸಲಾಗಿದ್ದು, ಸದರಿ ಸಂಸ್ಥೆಯವರ ವಿಳಂಬದಿಂದ ನಿರ್ಮಾಣ ಕಾರ್ಯ ಅಪೂರ್ಣವಾಗಿದೆ ಈ ಕುರಿತು ದಿನಾಂಕ 16 1 2006ರಂದು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ಜರುಗಿಸಿ ವಹಿಸಲಾಗಿರುವ ಎಲ್ಲಾ ಮನೆಗಳನ್ನು ಪೂರ್ಣಗೊಳಿಸಿ ವರದಿ ನೀಡುವಂತೆ ಸದರಿ ಏಜೆನ್ಸಿಗೆ ತಿಳಿಸಲಾಗಿದೆ

3) ಕೆಲವೊಂದು ಫಲಾನುಭವಿಗಳು ಮನೆಯನ್ನು ನಿರ್ಮಿಸಿಕೊಳ್ಳಲು ಆಸಕ್ತಿಯಿಲ್ಲದಿರುವುದರಿಂದ

528(350) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿ ಮುಂಡರಗಿ ಜಿ ಗದಗ ಇದರ ಅಧ್ಯಕ್ಷರಿಗೆ 2004ನೇ ಸಾಲಿನಲ್ಲಿ ನಡೆದ ಜನರಲ್ ಕಮಿಟಿ ರರಾವಿನ ನಕಲು ಹಾಗೂ ಇತರೆ ಮಾಹಿತಿ ಕೇಳಿ ದಿನಾಂಕ 5 10 2005 ರಂದು ಪತ್ರ ಬರೆದಿದ್ದರೂ, ಈವರೆವಿಗೂ ಮಾಹಿತಿ ಕೊಟ್ಟಿರುವುದಿಲ್ಲ ಕಾರಣ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ,

ಆ) ಅಧ್ಯಕ್ಷರು ಮೀಟಿಂಗ್ ಆದ ರರಾವುಗಳನಲ್ಲದೇ ಹೊಟ್ಟ ರರಾವುಗಳನ್ನೂ ಬರೆದಿದ್ದಾರೆಂದು ತಿಳಿದು ಬಂದಿದ್ದು, ಇಲ್ಲಿಯವರೆಗೆ ಜನರಲ್ ಕಮಿಟಿ ರರಾವಿನ ನಕಲು ಕೊಟ್ಟಿರುವುದಿಲ್ಲವೆಂಬುದರ ಬಗ್ಗೆ ವಿಚಾರಣೆ ಮಾಡಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಮತ್ತು ಆ) ದಿನಾಂಕ 5 10 2005ರ ಮಾನ್ಯ ಶಾಸಕರ ಪತ್ರಕ್ಕೆ ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿ, ಮುಂಡರಗಿ, ಗದಗ್ ಜಿಲ್ಲಾ ರವರು ಯಾವುದೇ ಮಾಹಿತಿ ನೀಡದೇ ಇರುವ ಬಗ್ಗೆ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ವಿಚಾರಿಸಿ ಪೂರ್ಣ ವರದಿಯನ್ನು ನೀಡಲು ಈಗಾಗಲೇ ಸೂಚಿಸಿರುತ್ತಾರೆ

529(352) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮುಂಡರಗಿ ತಾಲ್ಲೂಕು ಶಿಂಗಾಟಾಲೂರು (ಹುಲಿಗುಡ್ಡ) ಏತ ನೀರಾವರಿ ಕಾಮಗಾರಿ ಯಾವಾಗಿನಿಂದ ಪ್ರಾರಂಭವಾಗಿದೆ,

ಆ) ಈ ಯೋಜನೆ ಮುಗಿದು ಎಂದಿನಿಂದ ರೈತರಿಗೆ ನೀರಾವರಿ ಒದಗಿಸಲಾಗುತ್ತದೆ,

ಇ) ಈ ಯೋಜನೆಯಲ್ಲಿ ಎಷ್ಟು ಗ್ರಾಮಗಳು ಮುಳುಗಡೆಯಾಗುತ್ತವೆ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸಲಾಗಿದೆಯೇ, (ವಿವರ ನೀಡುವುದು)

ಈ) ಈ ಯೋಜನೆಯಲ್ಲಿ ರೈತರ ಜಮೀನುಗಳು ಎಷ್ಟು ಎಕರೆ ಮುಳುಗಡೆಯಾಗುತ್ತದೆ ಮತ್ತು ರೈತರಿಗೆ ಪರಿಹಾರ ಕೊಡಲಾಗಿದೆಯೇ ಹಾಗೂ ಪ್ರತಿ ಎಕರೆಗೆ ಎಷ್ಟು ಹಣ ಸರ್ಕಾರ ನಿಗದಿ ಮಾಡಲಾಗಿದೆ,

ಉ) ಈ ಯೋಜನೆಯ ಅಂದಾಜು ವೆಚ್ಚ ಎಷ್ಟು ಮತ್ತು ಯಾವ ಯಾವ ತಾಲ್ಲೂಕುಗಳಿಗೆ ಎಷ್ಟು ಎಕರೆ ನೀರಾವರಿ ಆಗುತ್ತದೆ, (ವಿವರ ನೀಡುವುದು)?